**ಹೆಚ್ಚುವರಿ ಸಿವಿಲ್ ಹಾಗೂ ಪ್ರಥಮ ದರ್ಜೆಯ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ ಯಾದಗಿರಿ.**

**ಸಿ.ಸಿ. ನಂಃ 723/2017**

**ಉಪಸ್ಥಿತರುಃ- ಶ್ರೀ ರಾಹುಲ ರಾವ್ ಬಿ.ಎ.ಎಲ್.ಎಲ್.ಬಿ ಹೆಚ್ಚುವರಿ ಸಿವಿಲ್ ಮತ್ತು ಜೆ.ಎಂ.ಎಫ್.ಸಿ ನ್ಯಾಯಾಧೀಶರು ಯಾದಗಿರಿ, ಈ ಕೆಳಗಿನ ಆರೋಪಿ.**

**ಫಿರ್ಯಾಧಿದಾರರುಃ ಕರ್ನಾಟಕ ಸರ್ಕಾರದ ಪರವಾಗಿ ಯಾದಗಿರಿ (ಗ್ರಾ) ಪೋಲಿಸ ಠಾಣೆ**

**// ವಿರುದ್ಧ //**

**ಆರೋಪಿತರು : ಮಾಳಪ್ಪ**

| | |
|---|---|
| **ಆರೋಪಿತರುಃ 1.** | ಮಾಳಪ್ಪ ತಂದೆ ರಾಯಪ್ಪ ಮೇಟಿ,<br>ಸಾಃ ಸೈದಾಪೂರ<br>ತಾಃ ಶಹಾಪುರ ಜಿಃ ಯಾದಗಿರಿ. |

**ಆಪಾದನೆಯ ಸಾರಾಂಶ**

ದಿನಾಂಕಃ 27-07-2015 ರಂದು ಯಾದಗಿರಿ (ಗ್ರಾ) ಪೋಲಿಸ ಠಾಣಾ ವ್ಯಾಪ್ತಿಯಲ್ಲಿ ಬರುವ ರಾಮಸಮುದ್ರ ಮೈಲಾಪುರ ರೋಡಿನ ಮೇಲೆ 1 ನೇ ಆರೋಪಿಯಾದ ನೀನು ಆಟೋ ನಂ. ಕೆಎ-339204 ನೇದ್ದನ್ನು ಅತಿವೇಗ ಮತ್ತು ಅಲಕ್ಷ್ಯತದಿಂದ ನಡೆಸಿಕೊಂಡು ಹೋಗಿ ನಿಯಂತ್ರಣ ತಪ್ಪಿದ್ದರಿಂದ ಮೈಲಾಪೂರ ಸೀಮೆಯ ಕಾನಿ ಕರೆಯ ಹತ್ತಿರ ರೋಡಿನ ಎಡಬದಿಗೆ ಬರುವ ಗ್ರೀಲಗೆ ಡಿಕ್ಕಿಪಡಿಸಿದ್ದು, ಈ ಮೂಲಕ ಭಾರತೀಯ ದಂಡ ಸಂಹಿತೆ ಕಲಂ 279 ರ ಅಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞಾನದೊಳಗೆ ಮಾಡಿರುತ್ತೀರಿ.

2. ಈ ಮೇಲೆ ಹೇಳಿದ ದಿನಾಂಕ, ಸಮಯ ಸ್ಥಳ ಮತ್ತು ಸಂದರ್ಭದಲ್ಲಿ 1 ನೇ ಆರೋಪಿಯಾದ ನೀನು ನಿನ್ನ ಆಟೋವನ್ನು ಅತಿವೇಗ ಮತ್ತು ಅಲಕ್ಷ್ಯತದಿಂದ ನಡೆಸಿ ಒಮ್ಮೇಲೆ ಆಟೋವನ್ನು ಎಡಬದಿಗೆ ಬರುವ ಗ್ರೀಲಗೆ ಡಿಕ್ಕಿಪಡಿಸಿದ್ದರಿಂದ ಚಾಸಾಃ7 ರವರಿಗೆ ಗಂಭೀರ ಸ್ವರೂಪದ ಗಾಯವಾಗಿದ್ದು, ಚಾಸಾಃ8 ಮತ್ತು 9 ರವರಿಗೆ ಸಾದ ಸ್ವರೂಪದ ಗಾಯಗೊಂಡಿದ್ದು

ಗಾಯಗೊಂಡಿದ್ದು, ಈ ಮೂಲಕ ಭಾರತೀಯ ದಂಡ ಸಂಹಿತೆ ಕಲಂ 337, 338 ರ ಅಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞಾನದೊಳಗೆ ಮಾಡಿರುತ್ತೀರಿ.

3. ಈ ಮೇಲೆ ಹೇಳಿದ ದಿನಾಂಕ, ಸಮಯ ಸ್ಥಳ ಮತ್ತು ಸಂದರ್ಭದಲ್ಲಿ 1 ನೇ ಆರೋಪಿಯಾದ ನೀನು ಆಟೋವನ್ನು ಅತಿವೇಗ ಮತ್ತು ಅಲಕ್ಷ್ಯತದಿಂದ ನಡೆಸಿ ಒಮ್ಮೇಲೆ ಆಟೋವನ್ನು ಎಡಬದಿಗೆ ಬರುವ ಗ್ರೀಲಗೆ ಡಿಕ್ಕಿಪಡಿಸಿದ್ದರಿಂದ ಚಾಸಾ፥1 ಹಣಮಂತ ಇವರು ಬಾರಿ ಗಯಗೊಂಡಿದ್ದರಿಂದ ಉಪಚಾರಕ್ಕಾಗಿ ಸರ್ಕಾರಿ ಆಸ್ಪತ್ರೆಗೆ 108 ಅಂಬುಲೇನ್ಸನಲ್ಲಿ ಕರೆದುಕೊಂಡು ಹೋದಾಗ ಆಸ್ಪತ್ರೆಯ ಗೇಟಿನ ಹತ್ತಿರ ಮಧ್ಯಾಹ್ನ 01-30 ಗಂಟೆ ಸುಮಾರಿಗೆ ಮೃತಪಟ್ಟಿದ್ದು, ಈ ಮೂಲಕ ಭಾರತೀಯ ದಂಡ ಸಂಹಿತೆ ಕಲಂ 304(ಎ) ರ ಅಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞಾನದೊಳಗೆ ಮಾಡಿರುತ್ತೀರಿ.

(ಮೇಲ್ಕಾಣಿಸಿದ ಆಪಾದನೆ ನನ್ನ ಉಕ್ತಲೇಖನದಂತೆ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಿಸಿ ತೆರೆದ ನ್ಯಾಯಾಲಯದಲ್ಲಿ ಆರೋಪಿಗೆ ತಿಳಿಯುವ ಭಾಷೆಯಲ್ಲಿ ಓದಿ ಹೇಳಲಾಯಿತು.)

ದಿನಾಂಕ 18-07-2025

**ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು**
**ಪ್ರ.ದ.ನ್ಯಾ.ದಂ.ಗಳು, ಯಾದಗಿರಿ.**